**ಕರ್ನಾಟಕ ಸರ್ಕಾರ**

ಸಂ:ಗ್ರಾಅಪ 21 ಗ್ರಾನೀಸ (2) 2012

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ:21.12.2012

**ರಾಜ್ಯದ ಎಲ್ಲಾ (30) ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.**

**ತುರ್ತು ಸಂದೇಶ**

---

2012–13ರ ಸಾಲಿನಲ್ಲಿ ಅನುಮೋದಿತ ಕ್ರಿಯಾ ಯೋಜನೆಯನ್ವಯ ಆರ್ಥಿಕ ಮತ್ತು ಭೌತಿಕ ಪ್ರಗತಿ ತೀವ್ರಗೊಳಿಸಿ, IMISನಲ್ಲಿ ಅಂಕಿಅಂಶಗಳನ್ನು ಸಮರ್ಪಕವಾಗಿ ದಾಖಲಿಸಲು ಸರ್ಕಾರದ Express Message ಸಮ ಸಂಖ್ಯೆ ದಿನಾಂಕ:1.8.2012 ಮತ್ತು 10.9.2012ಗಳಲ್ಲಿ ಸೂಚಿಸಲಾಗಿದೆ (.) ಆದಾಗ್ಯೂ, ನಿರೀಕ್ಷಿತ ಮಟ್ಟದಲ್ಲಿ ಪ್ರಗತಿ ದಾಖಲಾಗದಿರುವುದು ವಿಷಾದನೀಯ(.) ಕಾರಣ, ಕಳೆದ ಸಾಲಿನಲ್ಲಿಯೇ ಅನುಮೋದನೆಯಾದ ರೂ.816.42ಕೋಟಿ ಅಂದಾಜು ಮೊತ್ತದ 10,296 ಮುಂದುವರಿದ ವಿವಿಧ ಕುಡಿಯುವ ನೀರಿನ ಕಾಮಗಾರಿಗಳಿದ್ದು, ಕನಿಷ್ಠ ಸದರಿ ಕಾಮಗಾರಿಗಳನ್ನು ಪೂರ್ಣಗೊಳಿಸಿ ವೆಚ್ಚ ದಾಖಲಿಸಿದ್ದರೆ, ಇಷ್ಟರ ವೇಳೆಗೆ <5ಲಕ್ಷ ಮೊತ್ತದ ಹೊಸ ಕಾಮಗಾರಿಗಳು ಮತ್ತು MVS ಯೋಜನೆಗಳ ಒಟ್ಟಾರೆ ವೆಚ್ಚ ಸೇರಿ ಕನಿಷ್ಠ ರೂ.1000ಕೋಟಿ ಆರ್ಥಿಕ ಪ್ರಗತಿ ದಾಖಲಾಗಬೇಕಾಗಿತ್ತು(.) ಇದರ ಜೊತೆಗೆ, ರೂ.402.316ಕೋಟಿ ಅಂದಾಜು ಮೊತ್ತದ **ತುರ್ತು ಕ್ರಿಯಾ ಯೋಜನೆಗೂ** ಸಹ ಅನುಮೋದನೆ ನೀಡಲಾಗಿದೆ(.) ಸದರಿ ಕಾಮಗಾರಿಗಳನ್ನು ಈಗಾಗಲೇ ಸ್ಥಳೀಯ ಅವಶ್ಯಕತೆಯನುಸಾರ ಕೈಗೊಂಡು ಅನುಷ್ಠಾನಗೊಳಿಸಿರುವುದಾಗಿ ಮತ್ತು ಕೆಲವನ್ನು ಅನುಷ್ಠಾನಗೊಳಿಸುತ್ತಿರುವುದಾಗಿ ತಿಳಿದು ಬಂದಿದೆ(.) ಇವುಗಳ ವೆಚ್ಚವನ್ನು ಸಹ ರಾಜ್ಯ / ಕೇಂದ್ರ ವಲಯದ Coverage & Quality / NRDWP-Calamity/Scarcityಯಡಿ ದಾಖಲಿಸಲು ಸಹ ಅನುಮತಿ ನೀಡಲಾಗಿದೆ (.) ಆದ್ದರಿಂದ, ಪ್ರಗತಿಯನ್ನು ತಕ್ಷಣ ತೀವ್ರಗೊಳಿಸಿ ಪ್ರಗತಿ ಆಧಾರಿತ ಬಿಲ್‌ಗಳನ್ನು RTGS ಮುಖೇನ ಪಾವತಿಸಿ IMISನಲ್ಲಿ ದಾಖಲಿಸಬೇಕು (.) ಅಂತೆಯೇ, ಜಿಲ್ಲಾ ಪಂಚಾಯತ್ ಹಂತದಲ್ಲಿರುವ O&M ಬಾಬ್ತಿನ ಬ್ಯಾಂಕ್ ಖಾತೆಯಲ್ಲಿರುವ ಅನುದಾನವನ್ನು ಸಹ ಕೂಡಲೇ ಸಂಪೂರ್ಣವಾಗಿ ಆಯಾ ಯೋಜನೆ / ಕಾಮಗಾರಿ ಸಂಬಂಧ ಬಳಕೆ ಮಾಡಿ ಪ್ರಗತಿಯನ್ನು IMISನಲ್ಲಿ ದಾಖಲಿಸತಕ್ಕದ್ದು(.) ಇದರೊಂದಿಗೆ KRIDL ಮತ್ತು KUWSDB ಗೆ ವಹಿಸಿದ ಯೋಜನೆಗಳ ಬಾಬ್ತಿನ ಅನುದಾನವನ್ನು ಆಯಾ ಪ್ರಾಧಿಕಾರಗಳಿಗೆ ತಕ್ಷಣ ವರ್ಗಾಯಿಸಿ ಪ್ರಗತಿಯನ್ನು ಆಧರಿಸಿ ವೆಚ್ಚ ದಾಖಲಿಸಬೇಕು(.)

ಮೇಲ್ಕಂಡ ಪ್ರಕ್ರಿಯೆಯನ್ನು **ದಿ:26.12.2012ರೊಳಗೆ ಪೂರ್ಣಗೊಳಿಸಬೇಕು**(.) ರಾಜ್ಯದ ಯಾವುದೇ ಜಿಲ್ಲೆಯಲ್ಲಿ ಒಟ್ಟಾರೆ ಈಗ ಲಭ್ಯವಿರುವ ಅನುದಾನದ ಪೈಕಿ ಶೇಕಡ 10ಕ್ಕಿಂತ ಹೆಚ್ಚಿನ ಅನುದಾನ ಬಾಕಿ ಉಳಿಯದಂತೆ ನೋಡಿಕೊಳ್ಳಬೇಕು(.) ಈ ದಿಸೆಯಲ್ಲಿ EE/PREDs ಆಯಾ ಜಿಲ್ಲಾ ಪಂಚಾಯತ್‌ಗಳ ಸಮನ್ವಯದಲ್ಲಿ ಬಿಲ್‌ಗಳನ್ನು ಅನುಮೋದಿತ ಕ್ರಿಯಾ ಯೋಜನೆಗಳಿಗೆ ಸಂಬಂಧಿಸಿದಂತೆ ತಕ್ಷಣ ವಿಲೇವಾರಿ ಮಾಡಿ ಪ್ರಗತಿ ದಾಖಲಿಸಲು ಆದೇಶಿಸಿದೆ(.) ನಮ್ಮ ರಾಜ್ಯದ ಒಟ್ಟಾರೆ ವೆಚ್ಚ IMISನಲ್ಲಿ **ದಿ:27.12.2012ರೊಳಗಾಗಿ ರೂ.860ಕೋಟಿ** ದಾಖಲಾಗುವಂತೆ ಎಲ್ಲಾ ಪರಿಕ್ರಮಗಳನ್ನು NRDWP ಮಾರ್ಗಸೂಚಿಗಳನ್ವಯ ಅನುಸರಿಸಲು ಆದೇಶಿಸಿದೆ(.)

(ಡಾ॥ ಇ.ವಿ. ರಮಣ ರೆಡ್ಡಿ),
ಸರ್ಕಾರದ ಕಾರ್ಯದರ್ಶಿಗಳು
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಪ್ರತಿ:

1. ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿ ಸಂಕೀರ್ಣ, ನಂ.55, 4ನೇ ಮಹಡಿ, ಅಭಯ ಸಂಕೀರ್ಣ, ರೀಸಲ್ದಾರ್ ರಸ್ತೆ, ಶೇಷಾದ್ರಿಪುರಂ, ಬೆಂಗಳೂರು-20.
2. ರಾಜ್ಯದ ಎಲ್ಲಾ (8) ಅಧೀಕ್ಷಕ ಅಭಿಯಂತರರು, ಪಂಚಾಯತ್‌ರಾಜ್ ಇಂಜಿನಿಯರಿಂಗ್ ವೃತ್ತ, ಬೆಂಗಳೂರು.
3. ಎಲ್ಲಾ (30) ಜಿಲ್ಲಾ ಪಂಚಾಯತ್‌ಗಳ ಮುಖ್ಯ ಲೆಕ್ಕಾಧಿಕಾರಿಗಳು.
4. ರಾಜ್ಯದ ಎಲ್ಲಾ (38) ಕಾರ್ಯಪಾಲಕ ಇಂಜಿನಿಯರ್‌ಗಳು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗಗಳು, ಮತ್ತು
5. ರಾಜ್ಯದ ಎಲ್ಲಾ (176) ತಾಲ್ಲೂಕು ಪಂಚಾಯತ್‌ಗಳ ಕಾರ್ಯನಿವಾಹಕ ಅಧಿಕಾರಿಗಳು.